KABR500032792020

**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,**

**ಹೊಸಕೋಟೆ**

ಉಪಸ್ಥಿತರುಃ

**ಶ್ರೀ. ಸತೀಶ ಬಿ., ಬಿ.ಎ., ಎಲ್ಎಲ್.ಬಿ.,**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳು, ಹೊಸಕೋಟೆ.**

ದಿನಾಂಕಃ 1ನೇ ಆಗಸ್ಟ್, 2026

**ಅಪರಾಧಿಕ ಪ್ರಕರಣ ಸಂಖ್ಯೆ 2698/2020**

ಫಿರ್ಯಾದುದಾರರುಃ

ಸರಕಾರದ ಪರವಾಗಿ
ವೃತ್ತ ನಿರೀಕ್ಷಕರು,
ನಂದಗುಡಿ ವೃತ್ತ,
ಹೊಸಕೋಟೆ ತಾಲ್ಲೂಕು.

**(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)**

- ವಿರುದ್ಧ -

ಆರೋಪಿ :-

ಮುತ್ತುಕೃಷ್ಣ
ಬಿನ್. ಗುರುಸ್ವಾಮಿ,
ವಯಸ್ಸು 55 ವರ್ಷ,
ವಾಸ: ನಂ.ಸಿ47, ಬಿಡಿಎ ಫ್ಲಾಟ್,
ಕಲ್ಲಹಳ್ಳಿ, ಹಲಸೂರು,
ಬೆಂಗಳೂರು.

**(ಶ್ರೀ ವೈ.ಎಸ್ ಪ್ರಕಾಶ್ ವಕೀಲರು)**

| | | |
|---|---|---|
| ಅಪರಾಧ ನಡೆದ ದಿನಾಂಕ | : | 28.03.2020; |
| ಅಪರಾಧ ವರದಿಯಾದ ದಿನಾಂಕ | : | 28.03.2020; |
| ಆರೋಪಿ ದಸ್ತಗಿರಿಯಾದ ದಿನಾಂಕ | : | ಜಾಮೀನಿನ ಮೇಲಿರುತ್ತಾರೆ; |

| | | |
|---|---|---|
| ಫಿರ್ಯಾದುದಾರರ ಹೆಸರು | : | ಶ್ರೀ. ಮಹೇಶ್; |
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | : | 08.07.2026; |
| ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | : | 20.07.2026; |
| ಅಪರಾಧ ಕಾಯ್ದೆ ಮತ್ತು ಕಲಂ. | : | ಭಾರತ ದಂಡ ಸಂಹಿತೆ ಕಲಂ. 279 ಮತ್ತು 304(ಎ); |
| ನ್ಯಾಯಾಧೀಶರ ಅಭಿಪ್ರಾಯ | : | ಆರೋಪಿಯನ್ನು ನಿರ್ದೋಷಿ ಎಂದು ಪರಿಗಣಿಸಿದೆ. |

***

## ತೀರ್ಪು

ಆರೋಪಿಯು ಭಾರತ ದಂಡ ಸಂಹಿತೆ ಕಲಂ.279 ಮತ್ತು 304(ಎ) ರಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿದ್ದಾನೆಂದು ವೃತ್ತ ನಿರೀಕ್ಷಕರು, ನಂದಗುಡಿ ವೃತ್ತ, ಹೊಸಕೋಟೆ ರವರು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶ:**

ದಿನಾಂಕ 28.03.2020 ರಂದು ಬೆಳಿಗ್ಗೆ 10.50 ಗಂಟೆ ಸಮಯದಲ್ಲಿ ಆರೋಪಿಯು ತನ್ನ ಬಾಬ್ತು ಕ್ಯಾಂಟರ್ ವಾಹನ ನೊಂದಣಿ ಸಂಖ್ಯೆ ಕೆಎ-05-ಎ.ಈ-6601 ಕ್ಯಾಂಟರ್ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಹೊಸಕೋಟೆ-ಚಿಂತಾಮಣಿ ರಸ್ತೆಯ ಚೊಕ್ಕಹಳ್ಳಿ ಸಂತೆ ಮೈದಾನದ ಮುಂಭಾಗ ರಸ್ತೆ ದಾಟುತ್ತಿದ್ದ ಜಿತ್ರೇಂದ್ರ ಕುಮಾರ್ ಯಾದವ್ ರವರಿಗೆ ಡಿಕ್ಕಿಪಡಿಸಿ ಅಪಘಾತಪಡಿಸಿದ ಪರಿಣಾಮ ಜಿತ್ರೇಂದ್ರ ಕುಮಾರ್ ಯಾದವ್ ರವರ ತಲೆಗೆ ಮತ್ತು ಮೈ ಕೈಗಳಿಗೆ ತೀವ್ರ ಪೆಟ್ಟು ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿದ್ದು. ಆ ಮೂಲಕ ಆರೋಪಿಯು ಭಾರತ ದಂಡ ಸಂಹಿತೆ ಕಲಂ.279 ಮತ್ತು 304(ಎ) ರಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿದ್ದಾನೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ಸಾಕ್ಷಿ-1 ರವರು ನೀಡಿದ ದೂರಿನ ಆಧಾರದ ಮೇಲೆ ಸೂಲಿಬೆಲೆ ಪೊಲೀಸರು, ತಮ್ಮ ಠಾಣಾ ಅಪರಾಧಿಕ ಕ್ರಮ ಸಂಖ್ಯೆ 22/2020 ಭಾರತ ದಂಡ ಸಂಹಿತೆ ಕಲಂ.279 ಮತ್ತು 304(ಎ) ರಡಿಯಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ.

4. ತನಿಖಾಧಿಕಾರಿಗಳು ತಕ್ಷೀರು ಸ್ಥಳಕ್ಕೆ ಭೇಟಿ ನೀಡಿ, ಪಂಚರ ಸಮಕ್ಷಮ ಸ್ಥಳ ಮಹಜರನ್ನು ತಯಾರಿಸಿ, ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸಿಕೊಂಡು ಆರೋಪಿಯ ವಿರುದ್ಧ ಭಾರತ ದಂಡ ಸಂಹಿತೆ ಕಲಂ. 279 ಮತ್ತು 304(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿದ್ದಾನೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

5. ತನಿಖಾಧಿಕಾರಿಗಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ ನಂತರ ಭಾರತ ದಂಡ ಸಂಹಿತೆ ಕಲಂ. 279 ಮತ್ತು 304(ಎ) ರಡಿಯಲ್ಲಿ ಮಾಡಲಾದ ಅಪರಾಧದ ಬಗ್ಗೆ ಅಪರಾಧಿಕ ಸಂಜ್ಞೆಯನ್ನು ತೆಗೆದುಕೊಂಡು ಮತ್ತು ಪ್ರಕರಣವನ್ನು ನೋಂದಾಯಿಸಿಕೊಂಡು ಸಮನ್ಸ್ ಜಾರಿಮಾಡಿದ್ದು, ಅದರಂತೆ ಆರೋಪಿಯು ತನ್ನ ವಕೀಲರ ಮೂಲಕ ಹಾಜರಾಗಿದ್ದು, ತದನಂತರ ಅಪರಾಧಿಕ ಪ್ರಕ್ರಿಯ ಸಂಹಿತೆ ಕಲಂ. 207 ರಡಿಯಲ್ಲಿ ಅಭಿಯೋಜನಾ ದಾಖಲೆಗಳನ್ನು ಪೂರೈಸಿ, ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಲಾಗಿರುತ್ತದೆ.

6. ಆರೋಪಿಯ ವಾದವನ್ನು ಆಲಿಸಿದ ನಂತರ ಭಾರತ ದಂಡ ಸಂಹಿತೆ ಕಲಂ. 279 ಮತ್ತು 304(ಎ) ರಡಿಯಲ್ಲಿ ಅಪಾದನೆಯ ಸಾರಾಂಶವನ್ನು ಸಿದ್ಧಪಡಿಸಿ, ಓದಿ ಹೇಳಲಾಗಿ ಆರೋಪಿಯು ತಾನು ಯಾವುದೇ ಅಪರಾಧವನ್ನು ಮಾಡಿರುವುದಿಲ್ಲ ಮತ್ತು ಪ್ರತಿರಕ್ಷೆ ಮಾಡಿಕೊಳ್ಳುವುದಾಗಿ ತಿಳಿಸಿರುತ್ತಾರೆ.

7. ಅಭಿಯೋಜನೆ ಪರ ಪ್ರಕರಣವನ್ನು ರುಜುವಾತು ಪಡಿಸಲು ಒಟ್ಟು 11 ಸಾಕ್ಷಿಗಳ ಪೈಕಿ 4 ಸಾಕ್ಷಿಗಳನ್ನು ಕ್ರಮವಾಗಿ ಪ್ರಾಸಾ-1 ರಿಂದ 4 ಎಂದು, 8 ದಾಖಲೆಗಳನ್ನು ಕ್ರಮವಾಗಿ ನಿಪಿ-1 ರಿಂದ 8 ಎಂದು ಗುರುತಿಸಲಾಯಿತು. ಆರೋಪಿ ಪರ ವಕೀಲರು ಅಪಘಾತದಿಂದಾದ

ಮರಣದ ಕುರಿತು ಯಾವುದೇ ತಕರಾರು ಇರುವುದಿಲ್ಲ ಮತ್ತು ಮರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಾಕ್ಷಿಗಳ ಗೈರು ಹಾಜರಾತಿಯಲ್ಲಿ ಗುರುತಿಸಲು ಯಾವುದೇ ಅಭ್ಯಂತರ ಇರುವುದಿಲ್ಲ ಎಂದು ತಿಳಿಸಿದ ಮೇರೆಗೆ ಶವ ಪರೀಕ್ಷಾ ವರದಿಯನ್ನು ನಿಪಿ-7 ಎಂದು, ಶವ ಮಹಜರನ್ನು ನಿಪಿ-3 ಮತ್ತು ಮೋಟಾರು ವಾಹನ ಪರೀವೀಕ್ಷಣ ವರದಿಯನ್ನು ನಿಪಿ-8 ಎಂದು ಗುರುತಿಸಲಾಯಿತು ಹಾಗೂ ಸಾಕ್ಷಿ-5 ರಿಂದ 11 ರವರನ್ನು ವಿಚಾರಣೆಯಿಂದ ಕೈ ಬಿಡಲಾಯಿತು. ಈ ಪ್ರಕರಣದ ಫಿರ್ಯಾದಿ ಮತ್ತು ಪ್ರತ್ಯಕ್ಷ ಹಾಗೂ ಅಪಘಾತ ಸ್ಥಳದ ಮಹಜರ್ ಸಾಕ್ಷಿಗಳಾದ ಪ್ರಾಸಾ-1 ರಿಂದ 4 ರವರುಗಳು ಪ್ರತಿಕೂಲ ಸಾಕ್ಷ್ಯ ನುಡಿದಿದ್ದು, ತದನಂತರ ಸಹಾಯಕ ಸರ್ಕಾರಿ ಅಭಿಯೋಜಕರು ಇನ್ನುಳಿದ ಸಾಕ್ಷಿದಾರರುಗಳಿಗೆ ಸಮನ್ಸ್ ಜಾರಿಮಾಡುವಂತೆ ಪ್ರಾರ್ಥಿಸಿದ್ದು, ಆದರೆ ಈ ಪ್ರಕರಣದ ಅತಿ ಪ್ರಮುಖ ಸಾಕ್ಷಿಗಳು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದು, ಉಳಿದ ಸಾಕ್ಷಿಗಳನ್ನು ಕರೆಸಿದಾಗ್ಯೂ ಅಭಿಯೋಜನೆಯ ಉದ್ದೇಶ ಈಡೇರದೆಂದು ಪರಿಗಣಿಸಿ ಮನವಿಯನ್ನು ತಳ್ಳಿಹಾಕಲಾಯಿತು.

8. ಆರೋಪಿಯ ವಿರುದ್ದ ಅಭಿಯೋಜನಾ ಪಕ್ಷದವರು ಮಂಡಿಸಿದ ಮೌಖಿಕ ಸಾಕ್ಷ್ಯದಲ್ಲಿ ಯಾವುದೇ ತಪ್ಪು ಹೊರಿಸುವಂತಹ ಸಾಕ್ಷ್ಯವಿಲ್ಲದ ಕಾರಣ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ.313 ರಡಿಯಲ್ಲಿ ಆರೋಪಿಯ ಹೇಳಿಕೆ ಏನು ಇಲ್ಲವೆಂದು ತೆಗೆದುಕೊಳ್ಳಲಾಯಿತು. ಆರೋಪಿಯು ತನ್ನ ಪರವಾಗಿ ಯಾವುದೇ ಮೌಖಿಕ ಸಾಕ್ಷ್ಯ ಅಥವಾ ಅಥವಾ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

9. ಅಭಿಯೋಜನೆಯು ಈ ಕೆಳಕಂಡ ಅಂಶಗಳನ್ನು ಸಂಶಯಾತೀತವಾಗಿ ನಿರೂಪಿಸುವುದೇಃ

1. ದಿನಾಂಕ 28.03.2020 ರಂದು ಬೆಳಿಗ್ಗೆ 10.50 ಗಂಟೆ ಸಮಯದಲ್ಲಿ ಆರೋಪಿಯು ತನ್ನ ಬಾಬ್ತು ಕ್ಯಾಂಟರ್ ವಾಹನ ನೊಂದಣಿ ಸಂಖ್ಯೆ ಕೆಎ-05-ಎ.ಈ-6601 ಕ್ಯಾಂಟರ್ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಹೊಸಕೋಟೆ-ಚಿಂತಾಮಣಿ ರಸ್ತೆಯ ಚೊಕ್ಕಹಳ್ಳಿ ಸಂತೆ ಮೈದಾನದ ಮುಂಭಾಗ ರಸ್ತೆ ದಾಟುತ್ತಿದ್ದ ಜಿತ್ರೇಂದ್ರ ಕುಮಾರ್ ಯಾದವ್ ರವರಿಗೆ ಡಿಕ್ಕಿಪಡಿಸಿ

ಅಪಘಾತಪಡಿಸಿದ್ದು, ಆ ಮೂಲಕ ಆರೋಪಿಯು ಭಾರತ ದಂಡ ಸಂಹಿತೆ ಕಲಂ.279 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾನೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತಿದೆಯೇ?

2. ಈ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಅಪಘಾತಪಡಿಸಿದ ಪರಿಣಾಮ ಜಿತ್ರೇಂದ್ರ ಕುಮಾರ್ ಯಾದವ್ ರವರ ತಲೆಗೆ ಮತ್ತು ಮೈ ಕೈಗಳಿಗೆ ತೀವ್ರ ಪೆಟ್ಟು ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿದ್ದು, ಆ ಮೂಲಕ ಆರೋಪಿಯು ಭಾರತ ದಂಡ ಸಂಹಿತೆ ಕಲಂ.304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾನೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತಿದೆಯೇ?

3. ಯಾವ ಆದೇಶ**?**

10. ಅಭಿಯೋಜನೆ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು ಆರೋಪಿ ಪರವಾಗಿ ಶ್ರೀ ವೈ.ಎಸ್. ಪ್ರಕಾಶ್ ವಕೀಲರ ವಾದವನ್ನು ಆಲಿಸಲಾಯಿತು.

11. ನ್ಯಾಯಾಲಯದ ಮುಂದೆ ಸಲ್ಲಿಸಿರುವ ದಾಖಲೆಗಳನ್ನು ಮತ್ತು ಸಾಕ್ಷ್ಯಗಳನ್ನು ಪರಿಶೀಲಿಸಿ ಈ ಮೇಲೆ ಹೇಳಿದ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಲಾಗಿದೆ.

ಅಂಶ 1 : - ನಕಾರಾತ್ಮಕವಾಗಿ

ಅಂಶ 2 : - ನಕಾರಾತ್ಮಕವಾಗಿ

ಅಂಶ 3 : – ಅಂತಿಮ ಆದೇಶದಂತೆ,

ಈ ಕೆಳಕಾಣಿಸಿರುವ ಕಾರಣಗಳಿಗಾಗಿ

## **ಕಾರಣಗಳು**

12**.** **ಅಂಶ 1 ಮತ್ತು 2-** ಈ ಎರಡು ಅಂಶಗಳು ಒಂದಕ್ಕೊಂದು ಪೂರಕವಾಗಿದ್ದು ಮತ್ತು ಸಾಕ್ಷ್ಯ ಹಾಗೂ ಸಂಗತಿಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಈ ಮೇಲಿನ ಎರಡು ಅಂಶಗಳನ್ನು ಏಕಕಾಲಕ್ಕೆ ಚರ್ಚಿಸಲು ಒಟ್ಟಿಗೆ ತೆಗೆದುಕೊಳ್ಳಲಾಗಿದೆ. ಆರೋಪಿಯ

ಮೇಲೆ ಮಾಡಲಾದಂತಹ ಆರೋಪವನ್ನು ರುಜುವಾತುಪಡಿಸಲು ಫಿರ್ಯಾದಿಯಾದ ಸಾಕ್ಷಿ-1/ಮಹೇಶ್ ಇವರನ್ನು ಪ್ರಾಸಾ-2 ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಪ್ರಾಸಾ-2 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ಯಾವುದೇ ಯಾವುದೇ ಅಪಘಾತವನ್ನು ನೋಡಿರುವುದಿಲ್ಲ ಮತ್ತು ಅಪಘಾತ ಕುರಿತು ಯಾವುದೇ ಪಿರ್ಯಾದನ್ನು ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಪ್ರಾಸಾ-2 ರವರಿಗೆ ಫಿರ್ಯಾದನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಮತ್ತು ಸದರಿ ದಾಖಲೆಗೆ ಬಹಳ ವರ್ಷಗಳ ಹಿಂದೆ ಚೊಕ್ಕಹಳ್ಳಿಯ ಫ್ಯಾಕ್ಟರಿ ಗೇಟ್ ಬಳಿಯಲ್ಲಿ ಸಹಿ ಮಾಡಿರುವುದಾಗಿ ಮತ್ತು ಸದರಿ ದಾಖಲೆಯು ಯಾವುದರ ಕುರಿತು ಮತ್ತು ಅದರಲ್ಲಿ ಬರೆದಿರುವ ವಿಷಯಗಳು ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಪಿರ್ಯಾದನ್ನು ನಿಪಿ-2 ಎಂದು, ಪ್ರಾಸಾ-2 ರವರ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪ್ರಾಸಾ-2 ರವರಿಗೆ ತಕ್ಷೀರು ಸ್ಥಳದ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಮತ್ತು ಸದರಿ ದಾಖಲೆಗೆ ಬಹಳ ವರ್ಷಗಳ ಹಿಂದೆ ಚೊಕ್ಕಹಳ್ಳಿಯ ಫ್ಯಾಕ್ಟರಿ ಗೇಟ್ ಬಳಿಯಲ್ಲಿ ಸಹಿ ಮಾಡಿರುವುದಾಗಿ ಮತ್ತು ಸದರಿ ದಾಖಲೆಯು ಯಾವುದರ ಕುರಿತು ಮತ್ತು ಅದರಲ್ಲಿ ಬರೆದಿರುವ ವಿಷಯಗಳು ತನಗೆ ಗೊತ್ತಿಲ್ಲ ಹಾಗೂ ತಾನು ಯಾವುದೇ ಆಸ್ಪತ್ರೆಗೆ ಭೇಟಿ ನೀಡಿರುವುದಿಲ್ಲ ಮತ್ತು ತನ್ನ ಸಮಕ್ಷಮ ಯಾವುದೇ ಶವ ಮಹಜರನ್ನು ಜರುಗಿಸಿರುದಿಲ್ಲ ಎಂದು ನುಡಿದಿರುತ್ತಾರೆ. ಶವ ಮಹಜರನ್ನು ನಿಪಿ-3 ಎಂದು, ಪ್ರಾಸಾ-2 ರವರ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಪ್ರಾಸಾ-2 ರವರಿಗೆ ಅಪಘಾತ ಸ್ಥಳದ ಛಾಯಾ ಚಿತ್ರವನ್ನು ತೋರಿಸಲಾಗಿ ಅದರಲ್ಲಿ ಕಾಣುತ್ತಿರುವ ವ್ಯಕ್ತಿಯನ್ನು ಈ ಹಿಂದೆ ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಈ ಮೇಲಿನಂತೆ ಪ್ರಾಸಾ-2 ರವರು ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದು, ಪ್ರಾಸಾ-2 ರವರನ್ನು ಸಹಾಯಕ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಿದ್ದು ಅಭಿಯೋಜನೆಗೆ ಪೂರಕವಾಗುವ ಯಾವುದೇ ಅಂಶಗಳನ್ನು ಹೊರಗೆಡವಿರುವುದಿಲ್ಲ.

13. ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿಗಳಾದ ಸಾಕ್ಷಿ-2/ಲೋಕೇಶ್ ಮತ್ತು ಸಾಕ್ಷಿ-4/ಸುರೇಶ್ ಇವರನ್ನು ಕ್ರಮವಾಗಿ ಪ್ರಾಸಾ-1 ಮತ್ತು ಪ್ರಾಸಾ-4 ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಪ್ರಾಸಾ-1 ಮತ್ತು ಪ್ರಾಸಾ-4 ಇವರು ತಮ್ಮ ಮುಖ್ಯ

ವಿಚಾರಣೆಯಲ್ಲಿ ಪೊಲೀಸರು ತಮ್ಮನ್ನು ವಿಚಾರಿಸಿ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ ಮತ್ತು ತಾವು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ ಹಾಗೂ ತಮಗೆ ಪ್ರಸ್ತುತ ಪ್ರಕರಣದ ಕುರಿತು ಯಾವುದೇ ಮಾಹಿತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ದಿನಾಂಕ 03.05.2020 ರಂದು ಪ್ರಾಸಾ-1 ಮತ್ತು ಪ್ರಾಸಾ-4 ರವರು ನೀಡಿದ ಹೇಳಿಕೆಗಳನ್ನು ಕ್ರಮವಾಗಿ ನಿಪಿ-1 ಮತ್ತು ನಿಪಿ-6 ಎಂದು ಗುರುತಿಸಲಾಯಿತು. ಪ್ರಾಸಾ-1 ರವರಿಗೆ ಅಪಘಾತ ಸ್ಥಳದ ಛಾಯಾ ಚಿತ್ರವನ್ನು ತೋರಿಸಲಾಗಿ ಅದರಲ್ಲಿ ಕಾಣುತ್ತಿರುವ ವ್ಯಕ್ತಿಯನ್ನು ಈ ಹಿಂದೆ ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಈ ಮೇಲಿನಂತೆ ಪ್ರಾಸಾ-1 ಮತ್ತು ಪ್ರಾಸಾ-4 ರವರು ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದು, ಪ್ರಾಸಾ-1 ಮತ್ತು ಪ್ರಾಸಾ-4 ರವರನ್ನು ಸಹಾಯಕ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಿದ್ದು ಅಭಿಯೋಜನೆಗೆ ಪೂರಕವಾಗುವ ಯಾವುದೇ ಅಂಶಗಳನ್ನು ಹೊರಗೆಡವಿರುವುದಿಲ್ಲ.

14. ಈ ಪ್ರಕರಣದ ತಕ್ಷೀರು ಸ್ಥಳದ ಮಹಜರ ಸಾಕ್ಷಿಯಾದ ಸಾಕ್ಷಿ-4/ಮುನಿಶಾಮಪ್ಪ ಇವರನ್ನು ಪ್ರಾಸಾ-3 ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಪ್ರಾಸಾ-3 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ಯಾವುದೇ ಅಪಘಾತ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ ಮತ್ತು ಪೊಲೀಸರು ತನ್ನ ಸಮಕ್ಷಮ ಯಾವುದೇ ಅಪಘಾತ ಸ್ಥಳದ ಮಹಜರನ್ನು ಜರುಗಿಸಿ ಯಾವುದೇ ವಾಹನವನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಪ್ರಾಸಾ-3ರವರಿಗೆ ತಕ್ಷೀರು ಸ್ಥಳದ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು ಮತ್ತು ಸದರಿ ದಾಖಲೆ ಬಹಳ ವರ್ಷಗಳ ಹಿಂದೆ ಚೊಕ್ಕಹಳ್ಳಿಯ ಫ್ಯಾಕ್ಟರಿ ಗೇಟ್ ಬಳಿಯಲ್ಲಿ ಹೆಬ್ಬೆಟ್ಟಿನ ಗುರುತು ಮಾಡಿರುವುದಾಗಿ ಮತ್ತು ಸದರಿ ದಾಖಲೆಯು ಯಾವುದರ ಕುರಿತು ಮತ್ತು ಅದರಲ್ಲಿ ಬರೆದಿರುವ ವಿಷಯಗಳು ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ತಕ್ಷೀರು ಸ್ಥಳದ ಮಹಜರನ್ನು ನಿಪಿ-4 ಎಂದು ಗುರುತಿಸಲಾಯಿತು. ಪ್ರಾಸಾ-3 ರವರಿಗೆ ತಕ್ಷೀರು ಸ್ಥಳದ ಛಾಯಾಚಿತ್ರವನ್ನು ತೋರಿಸಲಾಗಿ ಅದರಲ್ಲಿ ಕಾಣುತ್ತಿರುವ ವ್ಯಕ್ತಿ ತಾನೇ ಆಗಿರುತ್ತೇನೆ ಮತ್ತು ಸದರಿ ಛಾಯಾಚಿತ್ರವನ್ನು ಯಾವಾಗ, ಎಲ್ಲಿ ಮತ್ತು ಯಾವುದರ ಸಲುವಾಗಿ ತೆಗೆಯಲಾಗಿತ್ತು ಎಂದು ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ತಕ್ಷೀರು ಸ್ಥಳದ ಛಾಯಾಚಿತ್ರವನ್ನು ಪ್ರಾಸಾ-3 ರವರು ನೋಡಿ ಗುರುತಿಸಿದ ಮೇರೆಗೆ ನಿಪಿ-5 ಎಂದು

ಗುರುತಿಸಲಾಯಿತು. ಈ ಮೇಲಿನಂತೆ ಪ್ರಾಸಾ-3 ರವರು ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದು, ಪ್ರಾಸಾ-3 ರವರನ್ನು ಸಹಾಯಕ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಿದ್ದು ಅಭಿಯೋಜನೆಗೆ ಪೂರಕವಾಗುವ ಯಾವುದೇ ಅಂಶಗಳನ್ನು ಹೊರಗೆಡವಿರುವುದಿಲ್ಲ.

15. ಈ ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದಾಗ, ಫಿರ್ಯಾದಿ ಮತ್ತು ಪ್ರತ್ಯಕ್ಷ ಹಾಗೂ ಅಪಘಾತ ಸ್ಥಳದ ಮಹಜರ್ ಸಾಕ್ಷಿಗಳು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿದ್ದು, ಅಪಘಾತವು ಯಾವ ರೀತಿಯಲ್ಲಿ ಮತ್ತು ಯಾರ ತಪ್ಪಿನಿಂದ ಆಗಿದೆ ಎಂದು ನಿರ್ಣಯಿಸಲು ಸಾಧ್ಯವಿರುವುದಿಲ್ಲ ಮತ್ತು ಅಪಘಾತವು ಆರೋಪಿಯ ತಪ್ಪಿನಿಂದಲೇ ಸಂಭವಿಸಿರುತ್ತದೆ ಎನ್ನುವ ಬಗ್ಗೆ ಯಾವುದೇ ಸ್ವೀಕಾರ್ಹವಾದ ಸಾಕ್ಷ್ಯಗಳು ಲಭ್ಯವಿರದ ಮೇರೆಗೆ ಅಭಿಯೋಜನೆಯು ಆರೋಪಿಯ ವಿರುದ್ಧ ಮಾಡಲಾದ ಆರೋಪವನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ. ಆದ್ದರಿಂದ ಅಂಶ-1 ಮತ್ತು 2 ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

16. <u>ಅಂಶ **3 :-**</u> ಅಂಶ **1** ಮತ್ತು **2** ಕ್ಕೆ ಈ ಮೇಲ್ಕಂಡಂತೆ ಉತ್ತರಿಸಿರುವುದರಿಂದ ಈ ಕೆಳಕಂಡಂತೆಃ

## ಆದೇಶ

ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ 255(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಆರೋಪಿಯನ್ನು ಭಾರತ ದಂಡ ಸಂಹಿತೆಯ ಕಲಂ.279 ಮತ್ತು 304(ಎ) ರಡಿಯಲ್ಲಿ ಮಾಡಲಾದ ಆರೋಪದಿಂದ ಈ ಕೂಡಲೇ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಿದೆ.

ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ 437(ಎ) ರಡಿಯಲ್ಲಿನ ಆರೋಪಿಯ ಮತ್ತು ಜಾಮೀನುದಾರರ

ಜಾಮೀನು ಮುಚ್ಚಳಿಕೆಯು ಈ ತೀರ್ಪು ನೀಡಿದ 6 ತಿಂಗಳ ನಂತರ ರದ್ದಾಗುವುದು ಎಂದು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಖ್ತಲೇಖನವನ್ನು ನೀಡಿದ್ದು, ಬೆರಳಚ್ಚು ಮಾಡಿದ ನಂತರ ಓದಿ ತಿದ್ದುಪಡಿ ಮಾಡಿ, ಪರಿಶೀಲಿಸಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ 1ನೇ ಆಗಸ್ಟ್, 2026 ರಂದು ಘೋಷಿಸಲಾಯಿತು.)

(ಸತೀಶ ಬಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್,ಸಿ., ಹೊಸಕೋಟೆ.

## ಅನುಬಂಧ

ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿಗಳು:-

ಪ್ರಾಸಾ-1 - ಲೋಕೇಶ್;

ಪ್ರಾಸಾ-2 - ಮಹೇಶ್;

ಪ್ರಾಸಾ-3 - ಮುನಿಶಾಮಪ್ಪ;

ಪ್ರಾಸಾ-4 - ಸುರೇಶ್.

ಅಭಿಯೋಜನೆಯ ಪರ ಹಾಜರುಪಡಿಸಿದ ದಾಖಲೆಗಳು:-

ನಿ ಪಿ 1 - ಪ್ರಾಸಾ-1 ರವರ ಹೇಳಿಕೆ;

ನಿ ಪಿ 2 - ಫಿರ್ಯಾದು;
ನಿ ಪಿ 2(ಎ) - ಪ್ರಾಸಾ-2 ರವರ ಸಹಿ;

ನಿ ಪಿ 2 - ಅಪಘಾತ ಸ್ಥಳದ ಮಹಜರು;
ನಿ ಪಿ 2(ಎ) - ಪ್ರಾಸಾ-1 ರವರ ಸಹಿ;
ನಿ ಪಿ 2(ಬಿ) - ಪ್ರಾಸಾ-2 ರವರ ಸಹಿ;

ನಿ ಪಿ 3 - ಶವ ಮಹಜರು;
ನಿ ಪಿ 3(ಎ) - ಪ್ರಾಸಾ-2 ರವರ ಸಹಿ;

ನಿ ಪಿ 4 - ಅಪಘಾತ ಸ್ಥಳದ ಮಹಜರು

ನಿ ಪಿ 5 - ಛಾಯಾಚಿತ್ರ;

ನಿ ಪಿ 6 - ಪ್ರಾಸಾ-4 ರವರ ಹೇಳಿಕೆ;

ನಿ ಪಿ 7 - ಶವ ಪರೀಕ್ಷಾ ವರದಿ;

ನಿ ಪಿ 8 - ಮೋಟಾರು ವಾಹನ ಪರೀವೀಕ್ಷಣಾ ವರದಿ.

ಆರೋಪಿಯ ಪರ ವಿಚಾರಣೆ ಮಾಡಿದ ಸಾಕ್ಷಿಗಳುಃ-

- ಇಲ್ಲ -

ಆರೋಪಿಯ ಪರ ಹಾಜರುಪಡಿಸಿದ ದಾಖಲೆಗಳುಃ-

- ಇಲ್ಲ -

ಅಭಿಯೋಜನೆಯ ಪರ ಗುರುತು ಮಾಡಿದ ಮುದ್ದೆ ಮಾಲುಗಳುಃ-

- ಇಲ್ಲ -

(ಸತೀಶ ಬಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಹೊಸಕೋಟೆ.

**ತೀರ್ಪನ್ನು ತೆರೆದ ನ್ಯಾಯಾಲದಲ್ಲಿ ಉಚ್ಚರಿಸಲಾಯಿತು ಪ್ರತ್ಯೇಕ**

## ಆದೇಶ

ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ 255(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಆರೋಪಿಯನ್ನು ಭಾರತ ದಂಡ ಸಂಹಿತೆಯ ಕಲಂ.279 ಮತ್ತು 304(ಎ) ರಡಿಯಲ್ಲಿ ಮಾಡಲಾದ ಆರೋಪದಿಂದ ಈ ಕೂಡಲೇ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಿದೆ.

ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ 437(ಎ) ರಡಿಯಲ್ಲಿನ ಆರೋಪಿಯ ಮತ್ತು ಜಾಮೀನುದಾರರ ಜಾಮೀನು ಮುಚ್ಚಳಿಕೆಯು ಈ ತೀರ್ಪು ನೀಡಿದ 6 ತಿಂಗಳ ನಂತರ ರದ್ದಾಗುವುದು ಎಂದು ಆದೇಶಿಸಲಾಗಿದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಹೊಸಕೋಟೆ.**